ಹೇಳಬಯಸುತ್ತೇನೆ. ಈ ಕಾಮಗಾರಿಗಳನ್ನು ಕೈಗೊಳ್ಳಲು ಅದಕ್ಕೆ ಸಾಕಷ್ಟು ಹಣವನ್ನು ರಿಲೀಜ್ ಮಾಡಿ ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇದರ ಬಗ್ಗೆ ಸೂಕ್ತ ಕೆಲಸ ಗಳನ್ನು ಕೈಗೊಳ್ಳುವ ಬಗ್ಗೆ ಆದೇಶ ನೀಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಗೃಹ ನಿರ್ಮಾಣ ಮತ್ತು ಹರಿಜನರ ಗಿರಿಜನರ ಬಗ್ಗೆ ಒಂದು ಪ್ರಶ್ನೆಯನ್ನು ಪ್ರಶ್ನೋತ್ತರ ಕಾಲದಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಹಾಕಿದ್ದೆ, ಆದರೆ ಅವರಿಂದ ಉತ್ತರ ಬರಲಿಲ್ಲ ಆದುದರಿಂದ ದಯಮಾಡಿ ಇದರ ಬಗ್ಗೆ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹೌಸ್ಕೀ ಸ್ಕೀಂ ಆಗಲೀ, ಬ್ಯಾಂಕ್ ಅಸಿಸ್ಟೆನ್ಸ್ ಸ್ಕೀಂ ಆಗಲೀ, ಇಲ್ಲವೇ ಎಕ್ಸ್‌ಪೆರಿಮೆಂಟ್ ಸ್ಕೀಂ ಆಗಲಿ ಇದರ ಬಗ್ಗೆ ನಮ್ಮ ಜನಗಳು ತಾಲ್ಲೂಕ್ ಆಫೀಸಿಗೆ ಹೋಗಿ ಬಂದು ನಮ್ಮ ಹತ್ತಿರ ಅವರ ಕಷ್ಟ ಸುಖಗಳನ್ನು ಹೇಳಿಕೊಳ್ಳುತ್ತಿದ್ದಾರೆ. ನಾವು ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ಕೇಳಿದರೆ ನಮಗೆ ಇನ್ನೂ ಗ್ರಾಂಟ್ ರಿಲೀಜ್‌ಆಗಿ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ಸರ್ಕಾರದವರು ಗಮನ ಕೊಟ್ಟು ಆದಷ್ಟು ಬೇಗ ಹಣವನ್ನು ರಿಲೀಸ್ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಮುಖ್ಯಮಂತ್ರಿಯವರ ಹೇಳಿಕೆ

ವಿಷಯ.—ಯಶವಂತಪುರದ ದಲಿತ ಸಂಘರ್ಷಣ ಸಮಿತಿಯ ಕಾರ್ಯಕರ್ತರ ಬಗ್ಗೆ.

MR. DEPUTY SPEAKER.—Now the hon'ble Chief Minister will make a statement regarding the incident that took place in Yeshwantapur as the matter was raised by the opposition party leaders.

† ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳವರು).—ಮಾನ್ಯ ಅಧ್ಯಕ್ಷರೇ, ನಿನ್ನೆ ಬೆಳಿಗ್ಗೆ ಯಶವಂತಪುರದ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ನನ್ನ ಸಹೋದ್ಯೋಗಿಯಾದ ಶ್ರೀಮಾನ್ ರಘುಪತಿಯವರ ಮನೆಗೆ ಹೋಗಿ ಮೊನ್ನೆ ಆದಂಥ ಘಟನೆಯ ಬಗ್ಗೆ ದೂರು ಕೊಟ್ಟರು. ಆಗ ಶ್ರೀಮಾನ್ ರಘುಪತಿಯವರು ತಕ್ಷಣವೇ ಅವರು ಇರತಕ್ಕಂಥ ಜಾಗಕ್ಕೆ ಹೋಗಿ ಅವರನ್ನೆಲ್ಲಾ ಭೇಟ್ಟಿಯಾಗಿ ಅವರಿಗೆ ಆಗಿರತಕ್ಕ ತೊಂದರೆಗಳನ್ನು ವಿಚಾರಿಸಿದರು. ಇದಾದ ಮೇಲೆ ಸುಮಾರು ೧೦½ ಗಂಟೆಗೆ ಗೊತ್ತಾಯಿತು ಸುಮಾರು ೭೫ ಜನ ಹೆಣ್ಣುಮಕ್ಕಳು ಮತ್ತು ಗಂಡಸರು ನನ್ನ ಮನೆಯ ಮುಂದೆ ಕೂತಿದ್ದಾರೆ, ನಾನು ಅಲ್ಲಿಗೆ ಬಂದು ಅವರನ್ನು ಕಾಣಬೇಕೆಂದು ಹೇಳುತ್ತಿದ್ದಾರೆ ಎನ್ನುವುದು ಗೊತ್ತಾಯಿತು. ನಾನು ಕೂಡಲೇ ಅಲ್ಲಿಗೆ ಹೋದೆ, ಅವರು ನನಗೂ ಒಂದು ಲಿಖಿತ ಮನವಿಯನ್ನು ಕೊಟ್ಟಿದ್ದಾರೆ. ೧೪ನೇ ತಾರೀಖಿನ ದಿವಸ ಅಲ್ಲಿ ಕೆಲವು ಜನರ ಗುಂಪು ಆ ಕಾಲೋನಿಗೆ ಬಂದು ದಲಿತ ಯುವಕ ಶ್ರೀನಿವಾಸ್ ಮತ್ತು ಅವರ ತಂದೆತಾಯಿಯನ್ನು ಥಳಿಸಿ ಮತ್ತು ಅವಾಚ್ಯ ಶಬ್ದಗಳಿಂದ ಬೈಯ್ದಿದ್ದಾರೆ. ಇದರ ಹಿಂದೆ ಒಂದು ಗಹನವಾದ ಘಟನೆ ನಡೆದದ್ದು ಉಂಟು. ಆ ಹಿನ್ನೆಲೆಯಲ್ಲಿ ಇದನ್ನು ನೋಡಬೇಕು. ಆ ಹಿನ್ನೆಲೆ ಯಾವುದು ಎಂದರೆ ಚುನಾವಣೆ. ಮೊನ್ನೆ ನಡೆದಂಥ ಚುನಾವಣೆ. ಆ ಚುನಾವಣೆಯಲ್ಲಿ ಜನತಾ ಪಕ್ಷದ ಕಾರ್ಯಕರ್ತರಿಗೂ ಮತ್ತೆ ಆ ಕಾಲೋನಿಯಲ್ಲಿ ವಾಸ ಮಾಡತಕ್ಕ ಕೆಲವು ಜನರಿಗೂ ಘರ್ಷಣೆ ಆದದ್ದು ಉಂಟು. ಬಹುಶಃ ಇದೇ ತರಹದ ವಾತಾವರಣ ಅಲ್ಲಿ ಮುಂದುವರಿಯುತ್ತಿದೆ. ನಾನು ಅವರನ್ನು ಭೇಟಿ ಮಾಡಿದಾಗ ಅವರಿಗೆ ಆದಂಥ ತೊಂದರೆಗಳನ್ನು ಕೇಳಿಕೊಂಡಿದ್ದೇನೆ. ಅವರು ಕೇಳಿರತಕ್ಕದ್ದು ೪ ಬೇಡಿಕೆಗಳು. ಮೊದಲನೆಯದು ಈ ಘಟನೆ ಆಗಿರತಕ್ಕದ್ದು ಕೆಲವು ಪೋಲೀಸಿನವರ ನಿರ್ಲಕ್ಷ್ಯತೆಯಿಂದ. ಆದುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಆ ಮೇಲೆ ಎರಡನೆಯದು ಏನಂದರೆ ಅಲ್ಲಿ ಕೆಲವು ಜನರು ಬಂದು ನಮಗೆ ಪುನಃ ಪುನಃ ತೊಂದರೆ ಕೊಡುತ್ತಿದ್ದಾರೆ, ಆದುದರಿಂದ ಅವರ ಮೇಲೆ ಸಕ್ರೀಯವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಅವರನ್ನು ಅರೆಸ್ಟ್ ಮಾಡಬೇಕು. ಮತ್ತೆ ಅವರ ಮೇಲೆ ಕಾಯಿದೆ ಪ್ರಕಾರವಾಗಿ ಮೊಕದ್ದಮೆ ಹೂಡಬೇಕು. ಮೂರನೆಯದು ಆ ಕಾಲೋನೀಯಲ್ಲಿ ನಾಗರೀಕ ಸೌಕರ್ಯಗಳ ಅಭಾವವಿದೆ ಅದನ್ನು ಒದಗಿಸಿಕೊಡತಕ್ಕದ್ದು. ಇನ್ನು ನಾಲ್ಕನೆಯದಾಗಿ, ಅಲ್ಲಿ ಒಂದು ಕಮ್ಯೂನಿಟಿ ಹಾಲ್ ಇದೆ, ಅದನ್ನು ಅಲ್ಲಿರತಕ್ಕ ಜನರಿಗೆ ಉಪಯೋಗಕ್ಕೆ ಬಿಟ್ಟು ಕೊಡುವುದು. ಏತಕ್ಕೆಂದರೆ ಈಗ ಆ ಹಾಲ್‌ನ್ನು ವೆಟರಿನ್ನರಿ ಡಿಪಾರ್ಟ್ ಮೆಂಟಿನವರು ಉಪಯೋಗಿಸುತ್ತಿದ್ದಾರೆ, ಅದನ್ನು ಖಾಲಿ ಮಾಡುತ್ತಿಲ್ಲ, ಅದನ್ನು ಖಾಲಿ

ಮಾಡಿಸಿ ತಮಗೆ ಕೊಡಿಸಿ ಕೊಡಬೇಕೆಂದು ಕೇಳಿದ್ದಾರೆ. ನಾನು ಪೋಲೀಸ್ ಅಧಿಕಾರಿಗಳ ಜೊತೆಗೆ ಮಾತನಾಡಿದ್ದೇನೆ. ಯಾವತ್ತಿನ ದಿವಸ ಗಲಾಟೆಯಾಯಿತು ಎಂದು ಗೊತ್ತಾಯಿತು ಅವತ್ತಿನ ದಿವಸ ಪೋಲೀಸ್ ಸಿಬ್ಬಂದಿ ಸಾಕಷ್ಟು ಪ್ರಮಾಣದಲ್ಲಿ ಹೋಗಲಿಲ್ಲ, ಅವರು ಹೋಗುವಷ್ಟು ಹೊತ್ತಿಗೆ ಗಲಾಟೆಯಾಗಿ ಹೋಗಿತ್ತು. ಅನಂತರ ಪೋಲೀಸಿನವರು ಇಬ್ಬರನ್ನು ಅರೆಸ್ಟ್ ಮಾಡಿದ್ದಾರೆ ಅನಂತರ ಬೇಲ್ ಮೇಲೆ ಬಿಟ್ಟಿದ್ದಾರೆ. ನಾನು ಹೇಳಿದ್ದೇನೆ ಪುನಃ ಇದರಲ್ಲಿ ತನಿಖೆ ಮಾಡಿ ಕೂಲಂಕುಷವಾಗಿ ವಿವರ ತಿಳಿದುಕೊಂಡು ಇದಕ್ಕೆ ಯಾರು ಕಾರಣ ಕರ್ತರಿದ್ದಾರೋ ಅಂಥವರ ಮೇಲೆ ಕಾಯಿದೆ ಪ್ರಕಾರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಮತ್ತೆ ಆ ಕಾಲೋನಿಯಲ್ಲಿ ನಾಗರೀಕ ಸೌಕರ್ಯದ ಬಗ್ಗೆ ಏನು ಹೇಳಿದ್ದಾರೆ ಅದರ ಬಗ್ಗೆ ನನ್ನ ಸಹೋದ್ಯೋಗಿಗಳಾದ ಶ್ರೀ ಚಂದ್ರಶೇಖರ್‌ರವರನ್ನು ಅಲ್ಲಿಗೆ ಕಳುಹಿಸಿ ಕೊಡುತ್ತೇನೆ. ಅವರು ಅಲ್ಲಿಗೆ ಇವತ್ತು ಸಾಧ್ಯವಾದರೆ ಇವೊತ್ತು ನಾಳೆ ಸಾಧ್ಯವಾದರೆ ನಾಳೆ ಸ್ವತಃ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ನೋಡಿ ಯಾವಯಾವ ಸೌಕರ್ಯಗಳ ಅತ್ಯಗತ್ಯವಾಗಿದೆಯೋ ಅದನ್ನು ಒದಗಿಸುತ್ತಾರೆ. ಮತ್ತೆ ಕಮ್ಯೂನಿಟಿ ಹಾಲ್ ಖಾಲಿ ಮಾಡಬೇಕೆಂದು ಹೇಳಿದ್ದಾರೆ ಈಗಾಗಲೇ ನಾನು ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ ಅದಷ್ಟು ಬೇಗ ಅದನ್ನು ಖಾಲಿ ಮಾಡ ಬೇಕೆಂದು ತಿಳಿಸಿದ್ದೇನೆ. ನಾನು ಇಷ್ಟು ಅವರಿಗೆ ಹೇಳಿದುದರಿಂದ ಅವರೆಲ್ಲಾ ತೃಪ್ತಿ ಪಟ್ಟುಕೊಂಡು ಹೋಗಿದ್ದಾರೆ, ಆದುದರಿಂದ ಇಲ್ಲಿ ಪೂರ್ಣ ಸದಸ್ಯರುಗಳು ಸಹ ಯಾವ ಕಳವಳ ಪಡುವುದಕ್ಕೆ ಕಾರಣ ವಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳವರು ಏನು ಹೇಳಿಕೆ ಕೊಟ್ಟಿದ್ದಾರೆ ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇದು ಏನೂ ಮೊದಲನೆಯ ಬಾರಿ ಆಗಿರತಕ್ಕ ಘಟನೆಯಲ್ಲ; ಇದು ತಮ್ಮ ಗಮನಕ್ಕೆ ಬಂದಿರಬಹುದು. ತಾ ೭–೧೦–೧೯೮೩ರಂದು ಘಟನೆಯಾಗಿದೆ. ಅವರು ಧಾಳಿ ಮಾಡಿ ಆಕ್ರಮಣ ಮಾಡಿ ಹೊಡೆದಿದ್ದಾರೆ, ಅನಂತರ ತಾ ೧೪–೧೦–೧೯೮೩ ರಂದು ಪುನ: ಈ ಘಟನೆಯಾಗಿದೆ. ಅನಂತರ ೧೬–೨–೧೯೮೩ ರಂದು ಪುನಃ ಆಕ್ರಮಣ ಮಾಡಿದರು ಆಗ ಅವರು ೨೫–೨–೧೯೮೩ ರಂದು ಸುಮಾರು ೩೦೦ ಮಂದಿ ಮೆರವಣಿಗೆ ಯಲ್ಲಿ ಜಾಥ ಹೋಗಿ ಪೋಲೀಸ್ ಕಮಿಷನರ್‌ರವರಿಗೆ ದೂರು ಕೂಡ ಕೊಟ್ಟು ಬಂದಿದ್ದಾರೆ. ಈ ರೀತಿಯಾಗಿ ಹರಿಜನರ ಕಾಲೋನಿಯಲ್ಲಿ ನಡೆಯುತ್ತಿದೆ ಎಂದು ದೂರು ಕೊಟ್ಟು ಬಂದಿದ್ದಾರೆ. ಪುನಃ ೨೬–೨–೧೯೮೩ ರಂದು ಗಲಾಟೆಯಾಗಿದೆ. ಅನಂತರ ೧೫–೩–೧೯೮೩ ರಂದು ರಾತ್ರಿ ೧೦.೪೫ ಕ್ಕೆ ತಾವು ಹೇಳಿದ ಪ್ರಕಾರವಾಗಿ ಮುನಿಯಪ್ಪ, ಕೆಂಪರಾಜು ಎನ್ನುವವರ ಮೇಲೆ ಕೆಲವು ಜನ ಚಾಕು, ಚೂರಿ, ಚೈನಿನಿಂದ ಧಾಳಿ ಮಾಡಿದ್ದಾರೆ. ಕೆಲವರ ಕಣ್ಣಿಗೆ ಕಾರದ ಪುಡಿ ಹಾಕಿ ಥಳಿಸಿದ್ದಾರೆ.

೧೨–೩೦ ಪಿ. ಎಂ.

ಆಗ ಕೂಡ ಪೋಲೀಸರಿಗೆ ದೂರು ಕೊಟ್ಟಿದ್ದಾರೆ. ಪೋಲೀಸರು ಏನು ಹೇಳಿದ್ದಾರೆಂದರೆ, ನೀವು ತರಲೆಗಳು ಎಂಬುದು ನಮಗೆ ಗೊತ್ತು ಹೋಗ್ರಿ ಎಂದು. ಇಷ್ಟೆಲ್ಲ ಘಟನೆ ಸೀರಿಸ್ ಆಗಿ ನಡೆದಿದೆ. ತಾರೀಖು ೧೬–೩–೧೯೩ ರಂದು ಪೋಲೀಸ್ ಕಾವಲಿನಲ್ಲೇ ಘಟನೆ ನಡೆದಿದೆ ಎಂದು ಆಪಾದನೆ ಇದೆ. ಅವರು ಆ ಬಗ್ಗೆ ಅರ್ಜಿ ಕೊಟ್ಟಿದ್ದಾರೆ, ಅದರ ಪ್ರತಿ ತಮಗೂ ಬಂದಿರಬಹುದು. ಅಂದು ೭–೪೫ ಕ್ಕೆ ಪೋಲೀಸ್ ಕಾವಲಿನಲ್ಲಿ ಕೆಲವು ದುಷ್ಕರ್ಮಿಗಳು ಅಂಜನಪ್ಪ ಎಂಬುವವರಿಗೆ ರೇಜರ್‌ನಲ್ಲಿ ಗಾಯಗೊಳಿಸಿ ದ್ದಾರೆ. ಮತ್ತು ಹೊಡೆದಿದ್ದಾರೆ. ಅನೇಕರು ತೀವ್ರ ರೀತಿಯಲ್ಲಿ ಗಾಯಗೊಂಡಿದ್ದಾರೆಂದೂ ತಿಳಿದು ಬಂದಿದೆ. ಅಲ್ಲಿ ಯಾರು ಕಳ್ಳಬಟ್ಟಿ ತಯಾರಿಸುತ್ತಿದ್ದಾರೆ ಅವರ ವಿರುದ್ಧವಾಗಿ ದಲಿತ ಸಂಘರ್ಷ ಸಮಿತಿ ಯವರು ಮತ್ತು ಡಾ. ಅಂಬೇಡ್ಕರ್ ಸಂಘದವರು ಪ್ರತಿಭಟನೆ ಮಾಡಿ ತಡೆಹಿಡಿಯಬೇಕೆಂದು ಹೋದಾಗ ಈ ರೀತಿ ಆಕ್ರಮಣ ನಡೆದಿದೆ ಎಂದು ತಿಳಿದು ಬಂದಿದೆ. ತಾವು ಹೇಳಿದ್ದೀರಿ, ಚುನಾವಣೆಯ ನಂತರ ಇದು ಹೆಚ್ಚಾಗಿದೆ ಎಂದು. ಏಕೆಂದರೆ ಇವರು ಚುನಾವಣೆಯನ್ನು ಬಹಿಷ್ಕಾರ ಮಾಡಿದ ಜನ ಎಂದು ಶಾಸಕರ ಮನೆಗೆ ಕೂಡ ಹೋಗಿದ್ದಾರೆಂದು ಇದೆ. ಆದರ ಮೇಲೆ ಪೇಳಿದ್ದಾರೆ, ನೀನೇ ಬೇಕಾದರೆ ಮಾತನಾಡಿ ಸುಧಾರಿಸಿಕೊಳ್ಳಿ ಎಂದು. ಈ ಮಾತನ್ನು ಎಷ್ಟರ ಮಟ್ಟಿಗೆ ರಾಮದೇವ್‌ರವರು ಹೇಳಿ

† ಈ ಚಿನ್ನೆ ಸಂಬಂಧ ಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದರೋ ಗೊತ್ತಿಲ್ಲ. ನೀವು ನಮಗೆ ಏನು ಮತ ಕೊಟ್ಟಿಲ್ಲವೆಂದು ಅರ್ಜಿಯಲ್ಲಿ ಹೇಳಿದ್ದಾರೆ. ಬಹುಶಃ ಅವರು ಇವತ್ತು ತಮಗೂ ಅರ್ಜಿಯನ್ನು ಕೊಟ್ಟಿದ್ದಾರೆಂದು ಕಾಣುತ್ತದೆ. ಅವರಿಗೆ ನ್ಯಾಯ ದೊರಕಿಸುವ ವಿಶ್ವಾಸ ಮೂಡಿಸತಕ್ಕದ್ದು ತಮ್ಮ ಆದ್ಯ ಕರ್ತವ್ಯವಾಗಿದೆ. ಅದನ್ನು ದಯಮಾಡಿ ನೋಡಿ, ಈ ರೀತಿ ಸೀರೀಸ್ ಆಗಿ ನಡೆದ ಘಟನೆಗಳಿಂದ ಹತಾಶರಾಗಿ ಪೋಲೀಸ್ ರಕ್ಷಣೆಯಾಗಲಿ ಯಾವುದೇ ರಕ್ಷಣೆ ಆಗಲಿ ಇಲ್ಲದೆ ಅವರು ಈಗಲೂ ಕೂಡ ಭಯಭೀತರಾಗಿದ್ದಾರೆ. ತಾವು ಮಾತನಾಡಿದ್ದರಿಂದ ಸಮಾಧಾನವಾಗಿರಬಹುದು. ಈಗಲೂ ಕೂಡ ಹರಿಜನರ ಗುಂಪಿಗೆ ಯಾವ ರಕ್ಷಣೆಯೂ ಇಲ್ಲವಾಗಿದೆ. ಇಷ್ಟು ತೀವ್ರತರವಾಗಿ ಗಾಯವಾದರೂ ಕೂಡ ಯಾವುದೇ ರೀತಿಯ ರಕ್ಷಣೆ ಇಲ್ಲದಿದ್ದರೆ ಹೇಗೆ ? ಇನ್ನು ಮುಂದಾದರೂ ಅವರಿಗೆ ರಕ್ಷಣೆ ಸಿಗತಕ್ಕ ಭರವಸೆಯನ್ನು ಹುಟ್ಟಿಸಬೇಕಾಗುತ್ತದೆ. ಪೋಲೀಸರು ನಿರ್ಲಕ್ಷ್ಯ ಭಾವನೆಯಿಂದ ನಡೆದರೂ ಕೂಡ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ? ಯಾವ ರೀತಿ ಅವರಿಗೆ ರಕ್ಷಣೆ ಕೊಡುತ್ತೀರಿ, ವಿಶ್ವಾಸ ಹುಟ್ಟಿಸುತ್ತೀರಿ ಎಂಬುದನ್ನು ದಯಮಾಡಿ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ವಿರೋಧ ಪಕ್ಷದ ನಾಯಕರಿಗೆ ಯಾರು ಅರ್ಜಿ ಕೊಟ್ಟಿದ್ದಾರೋ ಗೊತ್ತಿಲ್ಲ. ನಾನು ಅಲ್ಲಿಗೆ ಹೋದಾಗ ನನ್ನ ಕೈಯಲ್ಲಿ ಅರ್ಜಿ ಕೊಟ್ಟರು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮ್ಮ ಅರ್ಜಿ ಬೇರೆ ತರಹ ಇದೆ. ನಮ್ಮ ಅರ್ಜಿ ಬೇರೆ ತರಹ ಇದೆ.

ಶ್ರೀ ಹೆಚ್. ಡಿ. ಚೌಡಯ್ಯ.—ನಮ್ಮ ಪಕ್ಷದವರೇನಾದರೂ ಈ ರೀತಿ ಮಾಡಿದ್ದರೆ ಚಪ್ಪಾಳೆ ಹೊಡೆಯುತ್ತಿದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ಜನತಾ ಪಕ್ಷ, ಕಾಂಗ್ರೆ ಪಕ್ಷ ಎಂಬ ಪ್ರಶ್ನೆ ಬಂದಿಲ್ಲ. ಆ ಆಧಾರದ ಮೇಲೆ ನಾವು ಹೋಗಿಲ್ಲ

ಶ್ರೀ ಎಂ. ವೀರಪ್ಪ ಮೊಯಿಲಿ.—ಚಾಕು-ಚೂರಿಯವರನ್ನು ಯಾರ ಪಕ್ಷಕ್ಕೂ ಸೇರಿಸಬೇಡಿ. ಅವರು ಎಲ್ಲಿದ್ದರೂ ಹಿಡಿದು ಸರಿಯಾದ ಕ್ರಮ ತೆಗೆದುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಪಕ್ಷವೇ ಇರಲಿ, ಚಾಕು-ಚೂರಿಯವರ ಮೇಲೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಇಲ್ಲಿ ಏನು ಜಗಳವಾಯಿತು ಎಂದರೆ, ವೈಯಕ್ತಿಕವಾಗಿ ಕೆಲವೊಂದು ಘರ್ಷಣೆಗಳು ನಡೆದವು ಅವರ ಕಡೆ ಕೆಲವು ಕೋಮು, ಇವರ ಕಡೆ ಕೆಲವು ಕೋಮು ಇರಬಹುದು. ಇಲ್ಲಿ ರಾಜಕೀಯ ಇಲ್ಲ ಚುನಾವಣೆ ಕಾರಣವಲ್ಲ. ಚಿಕ್ಕೇಗೌಡರ ಕ್ಷೇತ್ರದಲ್ಲಿ ಬಹಳ ಜನ ಅವರ ಅಭಿಮಾನಿಗಳು ಇರುತ್ತಾರೆ ಅಂದಾಕ್ಷಣ ಎಲ್ಲರೂ ಅವರ ಪಕ್ಷದವರು ಇರಬೇಕೆಂದು ಇಲ್ಲ. ಚುನಾವಣೆಯಲ್ಲಿ ವಿರುದ್ಧವಾಗಿ ಮಾಡಿರಬಹುದು, ಅವರಿಗೆ ಒಂದು ರೀತಿ ಸೇಡು ಇರುತ್ತದೆ. ಶಾರೀರಕವಾಗಿ ಸೇಡು ತೀರಿಸಿಕೊಳ್ಳದಿದ್ದರೆ ಅವರಿಗೆ ಸಮಾಧಾನವಾಗುವುದಿಲ್ಲವೆಂದು ಕಾಣುತ್ತದೆ. ಹೋಗುವಾಗ, ಬರುವಾಗ, ನಿಮ್ಮ ಸರ್ಕಾರ ಹೋಗಿ ನಮ್ಮ ಸರ್ಕಾರ ಬಂದರೆ ಏನು ಮಾಡುತ್ತೀರೆಂದು ಹೇಳುತ್ತಾರೆ. ಆ ದಿವಸ ಒಂದು ಘಟನೆ ಪೋಲೀಸರ ಕಾವಲಿನಲ್ಲೇ ಆಯಿತೆಂದು ಹೇಳಿದರು. ಅದನ್ನು ನಾನು ಕೇಳಿದೆ. ಆ ಬಗ್ಗೆ ಹೇಳಿದರೆ ಪಾನ್ಯ ಸದಸ್ಯರು ನಗಕೂಡದು. ಅವರು ನೇಚರ್ ಕಾಲ್‌ಗೆ ಹೋಗಿದ್ದರಂತೆ. ಅದೇ ಸಮಯವನ್ನು ಇವರು ಸಾಧಿಸಿ, ಆ ಸಂದರ್ಭದಲ್ಲಿ ಒಬ್ಬರನ್ನು ಹೊಡೆದಿದ್ದಾರೆ. ಅವರಿಗೆ ಹೆಚ್ಚು ಗಾಯವೇನೂ ಆಗಿಲ್ಲ. ಅವರ ಬೇಡಿಕೆ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರಿಂದ ಅವರಿಗೆ ಸಮಾಧಾನವಾಗಿದೆ. ಹಗಲೂ ರಾತ್ರಿ ನಾವು ಅವರಿಗೆ ಪೋಲೀಸರ ರಕ್ಷಣೆ ಕೊಡುತ್ತೇವೆ.

ರಾಜ್ಯಪಾಲರ ಭಾಷಣಕ್ಕೆ ಮಂಡಿಸಿದ ವಂದಾನಾರ್ಪಣ ಪ್ರಸ್ತಾವ (ಮುಂದುವರೆದುದು)

† ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನರ್ಪಿಸುವ ಮುನ್ನ ಈ ರಾಜ್ಯದ ಜನತೆಗೂ ಹಾಗೂ ವಿರೋಧ ಪಕ್ಷದ ನಾಯಕರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ. ಏತಕ್ಕೆಂದರೆ, ಮೊದಲನೆಯದಾಗಿ ಅನೇಕ ವರ್ಷಗಳ ನಂತರ ಒಂದು ಹೊಸ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಕ್ಕೆ ಜನತೆಗೆ ಧನ್ಯವಾದಗಳನ್ನರ್ಪಿಸಬೇಕಾಗಿದೆ. ವಿರೋಧ ಪಕ್ಷದವರಿಗೆ ಏತಕ್ಕೆ ಅರ್ಪಿಸಬೇಕಾಗಿದೆ ಎಂದರೆ, ವಿರೋಧ ಪಕ್ಷದ ಮಿತ್ರರು ಚುನಾವಣೆಗೆ